**ದಿನಾಂಕಃ 12.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

8. ಈ ಪ್ರಕರಣದ ಸಂಪೂರ್ಣ ತನಿಖೆಯನ್ನು ನಾನೇ ನಿರ್ವಹಿಸಿರುತ್ತೇನೆಂದರೆ ಸರಿ. ಹಾಸನದ ಪೊಲೀಸ್ ಕಂಟ್ರೋಲ್ ರೂಂ ನಿಂದ ಘಟನೆ ಸಂಬಂಧ ಮಾಹಿತಿ ಬರುವ ಪೂರ್ವದಲ್ಲಿ ನನಗೆ ಅಥವಾ ಪೊಲೀಸ್ ಠಾಣೆಗೆ ಘಟನೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇರಲಿಲ್ಲ. ದಿಃ02.01.2018 ರಂದು ಬೆಳಿಗ್ಗೆ ಸುಮಾರು 10 ರಿಂದ 10.30 ಗಂಟೆ ಸಮಯದಲ್ಲಿ ಹಾಸನದ ಪೊಲೀಸ್ ಕಂಟ್ರೋಲ್ ರೂಂನಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ಸ್ವೀಕರಿಸಿದ ಕಾಲದಲ್ಲಿ ನಾನು ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿದ್ದೆ. ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಹಾಸನದ ಸರ್ಕಾರಿ ಆಸ್ಪತ್ರೆ ಸುಮಾರು 40-45 ಕಿ ಮೀ ದೂರದಲ್ಲಿದೆ. ಪೋಲೀಸ್ ಕಂಟ್ರೋಲ್ ರೂಂ ನಿಂದ ಮಾಹಿತಿ ಬಂದ 10-15 ನಿಮಿಷದಲ್ಲೇ ನಾನು ಠಾಣೆಯಿಂದ ಇಲಾಖಾ ಜೀಪಿನಲ್ಲಿ ಹೊರಟಿರುತ್ತೇನೆ. ನಾನು ಹಾಸನ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಹಾಸನ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಬರಲು 50 ನಿಮಿಷದಿಂದ ಒಂದು ಗಂಟೆಯ ಅವಧಿ ಆಗಿರುತ್ತದೆ. ಹಾಸನ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಬಂದ ನಂತರ ನಾನು ಆಸ್ಪತ್ರೆಯ ಪೊಲೀಸ್ ಔಟ್ ಪೋಸ್ಟಿನಿಂದ ಎಂ ಎಲ್ ಸಿ ಯನ್ನು ಬೆಳಿಗ್ಗೆ 11 ರಿಂದ 11.15 ಗಂಟೆ ಸಮಯದಲ್ಲಿ ಪಡೆದುಕೊಂಡಿರುತ್ತೇನೆ. ಎಂ ಎಲ್ ಸಿ ಯನ್ನು ಪಡೆದುಕೊಂಡ ನಂತರ ನಾನು ಸುಟ್ಟ ಗಾಯಗಳ ರೋಗಿಗಳಿಗೆ ಚಿಕಿತ್ಸೆ ನೀಡುವ ವಾರ್ಡಿನಲ್ಲಿದ್ದ ಗಾಯಾಳು ಲಕ್ಷ್ಮಿ ರವರನ್ನು ಭೇಟಿ ಮಾಡಿರುತ್ತೇನೆ. ಸುಟ್ಟ ಗಾಯಗಳ ರೋಗಿಗಳಿಗೆ ಚಿಕಿತ್ಸೆ ನೀಡುವ ವಾರ್ಡ್ ನಲ್ಲೇ ವೈದ್ಯರು

ಲಭ್ಯವಿದ್ದರು. ಲಭ್ಯವಿದ್ದ ವೈದ್ಯರ ಹೆಸರು ನನಗೆ ನೆನಪಿಲ್ಲ. ನಾನು ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ಪಡೆದುಕೊಂಡ ನಂತರ ಆಕೆಯ ಸ್ಥಿತಿಯ ಬಗ್ಗೆ ವೈದ್ಯರನ್ನು ವಿಚಾರಿಸಿದ್ದು ವೈದ್ಯರು ಗಾಯಾಳು ಲಕ್ಷ್ಮಿಯ ಸ್ಥಿತಿ ಗಂಭೀರ ಆಗಿರುತ್ತದೆ ಎಂದು ನನಗೆ ತಿಳಿಸಿದರು. ನಾನು ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ಪಡೆಯುವ ಕಾಲದಲ್ಲಿ ಆಕೆಯ ಮನೆಯವರು ವಾರ್ಡಿನ ಹೊರಗಡೆ ಇದ್ದರು. ನಾನು ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ಪಡೆಯುವ ಕಾಲದಲ್ಲಿ ನನ್ನ ಜೊತೆ ಎಎಸ್ಐ ಆಫೀಜುಲ್ಲಾ ಹಾಗೂ ವಾರ್ಡಿನಲ್ಲಿದ್ದ ವೈದ್ಯರು ಹಾಜರಿದ್ದರು. ಗಾಯಾಳು ಲಕ್ಷ್ಮಿ ರವರ ಹೇಳಿಕೆ ಪಡೆಯುವ ಕಾಲಕ್ಕೆ ನಾನು ಮಹಿಳಾ ಸಿಬ್ಬಂದಿಯನ್ನು ಕರೆದುಕೊಂಡು ಹೋಗಿರಲಿಲ್ಲ. ಗಾಯಾಳು ಲಕ್ಷ್ಮಿ ರವರು ಹೇಳಿಕೆ ನೀಡಿದ ಕಾಲದಲ್ಲಿ ಅವರಿಗೆ ಪ್ರಜ್ಞೆ ಇತ್ತು. ನಾನು ನಿಪಿ–28 ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎನ್ನಲಾದ ಕಾಲದಲ್ಲಿ ಗಾಯಾಳು ಲಕ್ಷ್ಮಿ ರವರಿಗೆ ತೀವ್ರ ಸ್ವರೂಪದ ಸುಟ್ಟ ಗಾಯಗಳು ಆಗಿದ್ದ ಕಾರಣದಿಂದ ಆಕೆ ಹೇಳಿಕೆ ಕೊಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ಪಡೆಯುವ ಕಾಲಕ್ಕೆ ಆಕೆಯ ಮೈಯಲ್ಲಿ ಎಲ್ಲೆಲ್ಲಿ ಸುಟ್ಟ ಗಾಯಗಳು ಆಗಿರುತ್ತವೆ ಎಂದು ಗಮನಿಸಲಿಲ್ಲ. ನಾನು ಗಾಯಾಳು ಲಕ್ಷ್ಮಿ ರವರ ಹೇಳಿಕೆ ಪಡೆಯಲು ಸುಮಾರು ಒಂದು ಗಂಟೆಯ ಅವಧಿ ಆಗಿರುತ್ತದೆ. ನಾನು ಗಾಯಾಳು ಲಕ್ಷ್ಮಿ ರವರ ಹೇಳಿಕೆ ಪಡೆದಾಗ ಮಧ್ಯಾಹ್ನ ಸಮಯ ಸುಮಾರು 12.15 ಆಗಿತ್ತು. ನಿಪಿ–28 ರಲ್ಲಿ ಗಾಯಾಳುವಿನ ಹೇಳಿಕೆಯನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಪಡೆದಿರುವ ಬಗ್ಗೆ ಕಾಣಿಸಲಾಗಿದೆ ನೀವು ನಿಮ್ಮ ಸಾಕ್ಷ್ಯದಲ್ಲಿ ಗಾಯಾಳು ಲಕ್ಷ್ಮಿ ರವರ ಹೇಳಿಕೆ ಪಡೆದಾಗ ಮಧ್ಯಾಹ್ನ ಸಮಯ ಸುಮಾರು 12.15 ಆಗಿರುವ ಬಗ್ಗೆ ಹೇಳಿರುತ್ತೀರಿ ಇವೆರಡರಲ್ಲಿ ಗಾಯಾಳುವಿನ ಪ್ರಶ್ನಿತ ಹೇಳಿಕೆ ಪಡೆದ ಯಾವ ಸಮಯ ಸರಿಯಾಗಿರುತ್ತದೆ ಎಂಬ

ವಕೀಲರ ಪ್ರಶ್ನೆಗೆ ಸಾಕ್ಷಿದಾರರು ನಿಪಿ–28 ರಲ್ಲಿ ಕಾಣಿಸಿರುವ ಸಮಯದಲ್ಲಿ ಗಾಯಾಳುವಿನ ಹೇಳಿಕೆ ಪಡೆಯಲಾಗಿದೆ ಎಂದು ಉತ್ತರಿಸಿರುತ್ತಾರೆ. ನಾನು ಗಾಯಾಳು ಲಕ್ಷ್ಮಿ ರವರ ಹೇಳಿಕೆ ಪಡೆಯುವ ಕಾಲದಲ್ಲಿ ಆಕೆ ನನ್ನನ್ನು ನೋಡಿ ಗುರುತಿಸಿರುತ್ತಾಳೆ. ಗಾಯಾಳು ಲಕ್ಷ್ಮಿ ಆಕೆಯ ಹೇಳಿಕೆ ನೀಡಿದ ಕಾಲದಲ್ಲಿ ಆಕೆ ಕಣ್ಣು ತೆರೆದುಕೊಂಡೇ ಆಕೆಯ ಹೇಳಿಕೆಯನ್ನು ನನಗೆ ನೀಡಿರುತ್ತಾಳೆ ಎಂದರೆ ಸರಿ. ಗಾಯಾಳು ಲಕ್ಷ್ಮಿ ರವರ ಬಲಗೈ ಸುಟ್ಟಿದ್ದ ಕಾರಣದಿಂದ ಆಕೆ ನಿಪಿ–28 ಹೇಳಿಕೆಗೆ ಆಕೆಯ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾಳೆ. ನಿಪಿ–28 ರಲ್ಲಿ ಗಾಯಾಳು ಲಕ್ಷ್ಮಿ ರವರ ಕಣ್ಣುಗಳು ಮುಚ್ಚಿದ್ದರಿಂದ ಆಕೆಯ ಎಡಗೈ ಹೆಬ್ಬೆಟ್ಟಿನ ಗುರುತನ್ನು ಪಡೆದ ಬಗ್ಗೆ ಕಾಣಿಸಲಾಗಿದೆ ಎಂಬ ವಕೀಲರ ಸಲಹೆಗೆ ಸಾಕ್ಷಿದಾರರು ಚಾಸಾ–26 ಆಫೀಜುಲ್ಲಾ ರವರು ಗಾಯಾಳು ಲಕ್ಷ್ಮಿ ರವರ ಹೇಳಿಕೆಯನ್ನು ಪಡೆದಿರುತ್ತಾರೆ ಹಾಗೂ ಆಫೀಜುಲ್ಲಾ ರವರೇ ಗಾಯಾಳು ಲಕ್ಷ್ಮಿಯ ಹೆಬ್ಬೆಟ್ಟಿನ ಗುರುತನ್ನೂ ಸಹ ಪಡೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಗಾಯಾಳು ಲಕ್ಷ್ಮಿ ರವರು ನಿಪಿ–28 ಹೇಳಿಕೆಗೆ ಆಕೆಯ ಹೆಬ್ಬೆಟ್ಟನ್ನು ಹಾಕಿದ ಕಾಲದಲ್ಲಿ ನಾನು ಸ್ಥಳದಲ್ಲಿಯೇ ಇದ್ದೆ ಆದರೆ ಲಕ್ಷ್ಮಿ ರವರ ಕಣ್ಣುಗಳು ತೆರೆದಿದ್ದವೋ ಅಥವಾ ಇಲ್ಲವೋ ಎಂದು ನಾನು ಗಮನಿಸಲಿಲ್ಲ. ನಿಪಿ–28 ಹೇಳಿಕೆಗೆ ಎಎಸ್ಐ ಆಫೀಜುಲ್ಲಾ ರವರು ಲಕ್ಷ್ಮಿ ರವರ ಕೈಯನ್ನು ಹಿಡಿದುಕೊಂಡು ಹೆಬ್ಬೆಟ್ಟಿನ ಗುರುತನ್ನು ಹಾಕಿಸಿರುತ್ತಾರೆ. ಈ ಬಗ್ಗೆ ನಿಪಿ–28 ರಲ್ಲಿ ಕಾಣಿಸಿಲ್ಲ. ನಿಪಿ–28 ಎಎಸ್ಐ ಆಫೀಜುಲ್ಲಾ ರವರ ಕೈ ಬರಹದಲ್ಲಿರುತ್ತದೆ. ಗಾಯಾಳು ಲಕ್ಷ್ಮಿ ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇಲ್ಲದಿದ್ದರೂ ಸಹ ನಾನು ಹಾಗೂ ಎಎಸ್ಐ ಆಫೀಜುಲ್ಲಾ ರವರು ಸೇರಿ ನಿಪಿ–28 ಸುಳ್ಳು ಹೇಳಿಕೆಯನ್ನು ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ.

9. ಗಾಯಾಳು ಲಕ್ಷ್ಮಿ ರವರ ಹೇಳಿಕೆ ಪಡೆದ ನಂತರ ಗಾಯಾಳುವಿನ

ಮರಣಪೂರ್ವ ಹೇಳಿಕೆಯನ್ನು ಪಡೆದುಕೊಳ್ಳುವಂತೆ ಮನವಿ ಪತ್ರವನ್ನು ನಾನು ಹಾಸನದ ತಹಶೀಲ್ದಾರ್ ರವರಿಗೆ ನೀಡಿರುತ್ತೇನೆ. ಹಾಸನದ ಸರ್ಕಾರಿ ಆಸ್ಪತ್ರೆಯಿಂದ ತಹಶೀಲ್ದಾರ್ ರವರ ಕಚೇರಿ ಸುಮಾರು 100 ಮೀಟರ್ ದೂರದಲ್ಲಿದ್ದು ನಾನು ತಹಶೀಲ್ದಾರ್ ರವರ ಕಚೇರಿಗೆ ಹೋಗಿ ಮನವಿ ಪತ್ರ ಸಲ್ಲಿಸಿರುತ್ತೇನೆ. ನಾನು ತಹಶೀಲ್ದಾರ್ ರವರ ಕಚೇರಿಗೆ ಹೋದ ಕಾಲದಲ್ಲಿ ತಹಶೀಲ್ದಾರ್ ರವರು ಹಾಜರಿದ್ದರು. ಮಧ್ಯಾಹ್ನ ಸುಮಾರು 12.15 ಗಂಟೆ ಸಮಯದಲ್ಲಿ ತಹಶೀಲ್ದಾರ್ ರವರು ಹಾಸನದ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ. ತಹಶೀಲ್ದಾರ್ ರವರು ಹಾಸನದ ಸರ್ಕಾರಿ ಆಸ್ಪತ್ರೆಗೆ ಬಂದಂತಹ ಕಾಲದಲ್ಲಿ ಅವರ ಜೊತೆ ಅವರ ಸಹಾಯಕರು ಇದ್ದರು. ತಹಶೀಲ್ದಾರ್ ರವರು ಗಾಯಾಳು ಲಕ್ಷ್ಮಿರವರ ಮರಣಪೂರ್ವ ಹೇಳಿಕೆ ಪಡೆದ ಕಾಲದಲ್ಲಿ ನಾನು, ಎಎಸ್ಐ ಆಫೀಜುಲ್ಲಾ ಹಾಗೂ ವೈದ್ಯರು ಹಾಜರಿದ್ದೆವು. ದಿಃ02.01.2018 ರಂದು ನಾನು ಸುಮಾರು ಎರಡೂವರೆ ಗಂಟೆಯ ಕಾಲ ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಇದ್ದೆ. ಈ ಅವಧಿಯಲ್ಲಿ ನಾನು ಸುಟ್ಟ ಗಾಯಗಳ ವಾರ್ಡಿನಲ್ಲಿ ಕರ್ತವ್ಯದಲ್ಲಿದ್ದ ವೈದ್ಯರ ಹೆಸರನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಗಾಯಾಳು ಲಕ್ಷ್ಮಿ ನಿಪಿ–28 ರಂತೆ ಯಾವುದೇ ಹೇಳಿಕೆ ನೀಡದಿದ್ದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲ್ಮಾಡಲಾಗಿದೆ ಎಂದರೆ ಸರಿಯಲ್ಲ. ಘಟನೆಯ ನಂತರ ಗಾಯಾಳು ಲಕ್ಷ್ಮಿ ಮೊದಲಿಗೆ ಪ್ರಥಮ ಚಿಕಿತ್ಸೆಯನ್ನು ಎಲ್ಲಿ ಪಡೆದಿರುತ್ತಾರೆ ಎನ್ನುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಾನು ಸಮರ್ಪಕವಾದ ತನಿಖೆ ಮಾಡಿದ್ದೇ ಆಗಿದ್ದಲ್ಲಿ ಈ ಬಗ್ಗೆ ನನಗೆ ತಿಳಿದು ಬರುತ್ತಿತ್ತು ಎಂದರೆ ಸರಿಯಲ್ಲ. ಲಕ್ಷ್ಮಿರವರಿಗೆ ಸುಟ್ಟ ಗಾಯ ಆದ ನಂತರ ಆಕೆ ಹೊಳೇನರಸೀಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡಿರುತ್ತಾರೆಂದರೆ ನನಗೆ ತಿಳಿದಿಲ್ಲ. ನಿಪಿ–29 ರಲ್ಲಿ ಗ್ಯಾಸ್ ಸ್ಟೌವ್ ಬರ್ಸ್ಟ್ ಆದ ಕಾರಣದಿಂದ ಗಾಯಾಳುವಿಗೆ

ಸುಟ್ಟ ಗಾಯಗಳು ಆಗಿವೆ ಎಂದು ಕಾಣಿಸಲಾಗಿದೆ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿದಾರರು ಸಾಕ್ಷ್ಯ ನುಡಿಯಲು ಸಮಯ ಕೋರಿದ್ದು ನೀಡಲಾಗಿರುತ್ತದೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.